**ಭಾರತೀಯ ರಿಸರ್ವ್ ಬ್ಯಾಂಕ್**
**ವಿದೇಶಿ ವಿನಿಮಯ ಇಲಾಖೆ**
**ಕೇಂದ್ರ ಕಚೇರಿ**
**ಮುಂಬೈ 400001**
ಆರ್‌ಬಿಐ / 2004-05 / 492

ಎಪಿ ( ಡಿಪಿ ಆರ್ ಶ್ರೇಣಿ) ಸುತ್ತೋಲೆ ಸಂಖ್ಯೆ 46 ಜೂನ್ 14, 2005

ಗೆ
ವಿದೇಶಿ ವಿನಿಮಯದಲ್ಲಿ ವ್ಯವಹರಿಸಲು ಅಧಿಕಾರ ಪಡೆದಿರುವ ಎಲ್ಲ ಬ್ಯಾಂಕುಗಳು

ಮಾನ್ಯರೆ,

**ನಿವಾಸಿ ಭಾರತೀಯರು ಭಾರತದ ಹೊರಗೆ ಭೇಟಿ ನೀಡಿರುವಾಗ ಅಂತರ ರಾಷ್ಟ್ರೀಯ ಡೆಬಿಟ್ ಕಾರ್ಡುಗಳನ್ನು / ಸ್ಟೋರ್ ವ್ಯಾಲ್ಯೂ ಕಾರ್ಡುಗಳನ್ನು / ಚಾರ್ಜ್ ಕಾರ್ಡುಗಳನ್ನು /ಸ್ಮಾರ್ಟ್ ಕಾರ್ಡುಗಳನ್ನು ಬಳಸುವುದು.**

ಭಾರತೀಯ ರಿಸರ್ವ್ ಬ್ಯಾಂಕು, ತನ್ನ ಅಧಿಸೂಚನೆ ಸಂಖ್ಯೆ ಎಫ್‌ಎಎಂಎ 15/ 2000 ಆರ್‌ಬಿ ದಿನಾಂಕ 3ನೇ ಮೇ 2000 ದ ಮೂಲಕ ' ಕರೆನ್ಸಿ' ಯಾಗಿ ಹಣಕಾಸು ಹೊಣೆಗಾರಿಕೆಯನ್ನು ಸೃಜಿಸಲು ಬಳಸಬಹುದಾದಂಥ ಡೆಬಿಟ್ ಕಾರ್ಡುಗಳನ್ನು, ಎಟಿಎಂ ಕಾರ್ಡುಗಳನ್ನು ಅಥವಾ ಯಾವುದೇ ಇತರ ಸಾಧನವನ್ನು ಅಧಿಸೂಚಿಸಿದೆ. ಭಾರತದ ಹೊರಗೆ ಭೇಟಿ ನೀಡಿರುವಾಗ ಮಾಡಿದ ವೆಚ್ಚಗಳಿಗೆ ಹಣ ಸಂದಾಯ ಮಾಡುವುದಕ್ಕಾಗಿ ನಿವಾಸಿಗಳು ಕಾರ್ಡ್‌ನ ಪರಿಮಿತಿಯ ಪ್ರಮಾಣದ ಮಟ್ಟಿಗೆ ಅಂತರ ರಾಷ್ಟ್ರೀಯ ಕ್ರೆಡಿಟ್ ಕಾರ್ಡ್‌ಗಳನ್ನು (ಐಸಿಸಿಗಳು) ಬಳಸುವುದಕ್ಕೆ ವಿದೇಶಿ ವಿನಿಮಯ ನಿರ್ವಹಣೆ (ಚಾಲ್ತಿ ಖಾತೆ ವ್ಯವಹಾರಗಳು) ನಿಯಮಗಳು, 2000 ದ 5 ನೆಯ ನಿಯಮದಲ್ಲಿ ಒಳಗೊಂಡಿರುವ ನಿರ್ಬಂಧಗಳು ಅನ್ವಯವಾಗುವುದಿಲ್ಲ ಎಂದು ಎ.ಪಿ. (ಡಿಐಆರ್ ಶ್ರೇಣಿ) ಸುತ್ತೋಲೆ ಸಂಖ್ಯೆ 73 ದಿನಾಂಕ ಜನವರಿ 24, 2003 ರ ಮೂಲಕ ಮತ್ತೆ ಸ್ಪಷ್ಟಪಡಿಸಲಾಗಿತ್ತು.

**ಎ. ಅಂತರರಾಷ್ಟ್ರೀಯ ಡೆಬಿಟ್ ಕಾರ್ಡ್:**

ವಿದೇಶೀ ವಿನಿಮಯದಲ್ಲಿ ವ್ಯವಹರಿಸಲು ಅದಿಕಾರ ಪಡೆದಿರುವ ಬ್ಯಾಂಕುಗಳು (ಎಡಿ ಬ್ಯಾಂಕುಗಳು) . ಅಂತರರಾಷ್ಟ್ರೀಯ ಡೆಬಿಟ್ ಕಾರ್ಡುಗಳನ್ನು (ಐಡಿಸಿಗಳು) ನೀಡುತ್ತಿದ್ದು ಈ ಕಾರ್ಡುಗಳನ್ನು ಒಬ್ಬ ನಿವಾಸಿ ತಾನು ವಿದೇಶಕ್ಕೆ ಭೇಟಿ ನೀಡಿರುವ ಸಮಯದಲ್ಲಿ ನಗದು ಹಣ ತೆಗೆಯುವುದಕ್ಕೆ ಅಥವಾ ವ್ಯಾಪಾರ ಸಂಸ್ಥೆಗಳಿಗೆ ಹಣ ಸಂದಾಯ ಮಾಡುವುದಕ್ಕೆ ಬಳಸಬಹುದು ಎಂಬುದನ್ನು ಮನಗಾಣಲಾಗಿದೆ. ಈ ಐಡಿಸಿ ಗಳನ್ನು ಅನುಮತೀಯ ಚಾಲ್ತಿ ಖಾತೆ ವ್ಯವಹಾರಗಳಿಗೆ ಮಾತ್ರ ಬಳಸಬಹುದು ಮತ್ತು ಭಾರತ ಸರ್ಕಾರದ ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದ ಅಧಿಸೂಚನೆ ಸಂಖ್ಯೆ ಜಿ ಎಸ್ ಆರ್ 381 ( ಇ) ದಿನಾಂಕ ಮೇ 3 , 2000 ರ ಅನುಸೂಚಿಗಳಲ್ಲಿ ತಿಳಿಸಿರುವಂತೆ ಬಾಬತ್ತುಗಳ ಪರಿಮಿತಿಗಳು ಈ ಕಾರ್ಡುಗಳನ್ನು ಬಳಸುವ ಮೂಲಕ ಮಾಡಿದ ಸಂದಾಯಗಳಿಗೂ ಅಷ್ಟೇ ಮಟ್ಟಿಗೆ ಅನ್ವಯವಾಗುತ್ತವೆ ಎಂದು ಸ್ಪಷ್ಟಪಡಿಸಲಾಗಿದೆ.

3. ಅಲ್ಲದೆ, ಐಡಿಸಿ ಗಳನ್ನು ಪ್ರತಿಬಂಧಿಸಿದ ಬಾಬತ್ತುಗಳಾದ ಲಾಟರಿ ಟಿಕೇಟುಗಳು, ನಿಷೇಧಿತ ಅಥವಾ ಬಹಿಷ್ಕರಿಸಿರುವ ಮ್ಯಾಗಝೀನ್‌ಗಳು ಮುಂತಾದವುಗಳನ್ನು ಖರೀದಿಸುವುದಕ್ಕೆ ಬಾಜಿಪಂದ್ಯಗಳಲ್ಲಿ ಭಾಗವಹಿಸುವುದಕ್ಕೆ,, ಕಾಲ್‌ಬ್ಯಾಕ್ ಸೇವೆಗಳಿಗೆ ಅಂದರೆ ವಿದೇಶಿ ವಿನಿಮಯವನ್ನು ಯಾವ ಬಾಬತ್ತುಗಳಿಗೆ / ಕಾರ್ಯ ಚಟುವಟಿಕೆಗಳಿಗೆ ತೆಗೆಯಲು ಅನುಮತಿಸಲಾಗಿಲ್ಲವೋ ಅಂಥ ಬಾಬತ್ತುಗಳಿಗೆ / ಕಾರ್ಯ ಚಟುವಟಿಕೆಗಳಿಗೆ ಹಣ ಸಂದಾಯ ಮಾಡುವುದಕ್ಕೆ ಇವೇ ಮುಂತಾದವುಗಳಿಗೆ ಅಂತರ ಜಾಲದಲ್ಲಿ ಬಳಸುವಂತಿಲ್ಲವೆಂದು ಸ್ಪಷ್ಟಪಡಿಸಲಾಗಿದೆ.

**4. ದಸ್ತಾವೇಜೀಕರಣ ಮತ್ತು ವರದಿ ಮಾಡುವಿಕೆ:**

ಅಂತರರಾಷ್ಟ್ರೀಯ ಡೆಬಿಟ್ ಕಾರ್ಡುಗಳನ್ನು ನೀಡುವಾಗ ಅಧಿಕೃತ ವ್ಯಾಪಾರಿ ಬ್ಯಾಂಕುಗಳು, ವಿದೇಶೀ ವಿನಿಮಯವನ್ನು ಬಿಡುಗಡೆ ಮಾಡುವುದಕ್ಕೆ ಅಗತ್ಯವಾದ ಪ್ರಸ್ತುತ ಕಾರ್ಯವಿಧಾನಗಳನ್ನು ಮತ್ತು ದಸ್ತಾವೇಜೀಕರಣವನ್ನು ಪಾಲಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಅಲ್ಲದೆ ಅಂತರ ರಾಷ್ಟ್ರೀಯ ಬ್ಯಾಂಕಿಂಗ್ ವಿಭಾಗಗಳು / ಅಧಿಕೃತ ವ್ಯಾಪಾರೀ ಬ್ಯಾಂಕುಗಳ ವಿದೇಶೀ ವಿನಿಮಯ ಇಲಾಖೆಗಳು ಐಡಿಸಿ ಧಾರಕನು ಬಳಸಿಕೊಂಡ ಒಟ್ಟು ವಿದೇಶಿ ವಿನಿಮಯ ಒಂದು ಕ್ಯಾಲೆಂಡರ್ ವರ್ಷದಲ್ಲಿ 100,000 ಅಮೇರಿಕಾ ಡಾಲರ್‌ಗಳನ್ನು ಮೀರಿದ ಪಕ್ಷದಲ್ಲಿ ಪ್ರತಿ ವರ್ಷದ ಡಿಸೆಂಬರ್ 31 ರಂದು ಇದ್ದಂತೆ (ಲಗತ್ತಿಸಿರುವ ನಮೂನೆಯ ಪ್ರಕಾರ ) ಒಂದು ವಿವರಣಾ ಪಟ್ಟಿಯನ್ನು ಸಲ್ಲಿಸಬೇಕು. ಈ ವಿವರಣಾ ಪಟ್ಟಿಯು ಮುಂದಿನ ವರ್ಷದ ಜನವರಿ 30ನೇ ತಾರೀಖಿನಂದು ಅಥವಾ ಅದಕ್ಕೆ ಮೊದಲು ಮುಖ್ಯ ಪ್ರಧಾನ ವ್ಯವಸ್ಥಾಪಕರು,ವಿದೇಶಿ ವಿನಿಮಯ ಇಲಾಖೆ, ಹೊರ ಪಾವತಿ ವಿಭಾಗ , ಕೇಂದ್ರ ಕಚೇರಿ, ಮುಂಬೈ 400 001 ಇವರಿಗೆ ತಲುಪಬೇಕು.

**ಬಿ. ಸ್ಟೋರ್ ವ್ಯಾಲ್ಯೂ ಕಾರ್ಡುಗಳು/ ಚಾರ್ಜ್ ಕಾರ್ಡ್‌ಗಳು / ಸ್ಮಾರ್ಟ್ ಕಾರ್ಡ್‌ಗಳು ಇತ್ಯಾದಿ**

5. ವಿದೇಶಕ್ಕೆ ಖಾಸಗಿ / ವ್ಯಾಪಾರ ಭೇಟಿಯ ಮೇಲೆ ಪ್ರವಾಸ ಕೈಗೊಂಡಿರುವ ನಿವಾಸಿಗಳಿಗೆ ಕೆಲವು ಅಧಿಕೃತ ವ್ಯಾಪಾರಿ ಬ್ಯಾಂಕುಗಳು ಕೂಡ ಸ್ಟೋರ್ ವ್ಯಾಲ್ಯೂ ಕಾರ್ಡ್‌ಗಳು/ ಚಾರ್ಜ್ ಕಾರ್ಡ್‌ಗಳು / ಸ್ಮಾರ್ಟ್ ಕಾರ್ಡ್‌ಗಳನ್ನು ನೀಡುತ್ತಿದ್ದು, ಈ ಕಾರ್ಡ್ ಗಳನ್ನು ಸಾಗರೋತ್ತರ ವ್ಯಾಪಾರೀ ಸಂಸ್ಥೆಗಳಲ್ಲಿ ಹಣ ಸಂದಾಯ ಮಾಡುವುದಕ್ಕೆ ಮತ್ತು ಎಟಿಎಂ ಟರ್ಮಿನಲ್‌ಗಳಲ್ಲಿ ಹಣ ತೆಗೆಯುವುದಕ್ಕೆ ಬಳಸುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಅಂಥ ಕಾರ್ಡುಗಳನ್ನು ನೀಡಲು ರಿಸರ್ವ್ ಬ್ಯಾಂಕ್‌ನಿಂದ ಮುಂಚಿತವಾಗಿ ಯಾವುದೇ ಅನುಮತಿ ಪಡೆಯುವ ಅಗತ್ಯವಿಲ್ಲ. ಆದರೂ ಅಂಥ ಕಾರ್ಡುಗಳ ಬಳಕೆಯು ಅನುಮತೀಯವಾದ ಚಾಲ್ತಿ ಖಾತೆ ವ್ಯವಹಾರಗಳಿಗೆ ಸೀಮಿತವಾಗಿದೆ ಮತ್ತು ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದ ವಿದೇಶೀ ವಿನಿಮಯ ನಿರ್ವಹಣೆ
(ಚಾಲ್ತಿ ಖಾತೆ ವ್ಯವಹಾರಗಳು) ನಿಯಮಗಳು, 2000ದ ಅಡಿಯಲ್ಲಿ ಗೊತ್ತುಪಡಿಸಿರುವ ಮಿತಿಗಳಿಗೆ ಒಳಪಟ್ಟಿರುತ್ತದೆ ಎಂದು ಸ್ಪಷ್ಟಪಡಿಸಲಾಗಿದೆ.

6. ಅಧಿಕೃತ ವ್ಯಾಪಾರಿ ಬ್ಯಾಂಕುಗಳು ಈ ಸುತ್ತೋಲೆಯ ಅಂಶಗಳನ್ನು ತಮ್ಮ ಘಟಕಗಳ ಮತ್ತು ಗ್ರಾಹಕರ ಗಮನಕ್ಕೆ ತರತಕ್ಕದ್ದು.

7.ಈ ಸುತ್ತೋಲೆಯಲ್ಲಿ ಒಳಗೊಂಡಿರುವ ನಿರ್ದೇಶನವನ್ನು ವಿದೇಶೀ ವಿನಿಮಯ ನಿರ್ವಹಣೆ ಅಧಿನಿಯಮ, 1999 ( 1999 ರ 42) ರ 10 (4) ಮತ್ತು 11 (1) ನೇ ಪ್ರಕರಣಗಳ ಅಡಿಯಲ್ಲಿ ಮತ್ತು ಯಾವುದೇ ಇತರ ಕಾನೂನಿನ ಅಡಿಯಲ್ಲಿ ಅಗತ್ಯಪಡಿಸಿರುವ ಅನುಮತಿಗಳು / ಅನುಮೋದನೆಗಳು ಯಾವುವಾದರೂ ಇದ್ದರೆ ಅವುಗಳಿಗೆ ಬಾಧಕವಾಗದಂತೆ ಹೊರಡಿಸಲಾಗಿದೆ.

**ತಮ್ಮ ವಿಶ್ವಾಸಿ,**

**ವಿನಯ್ ಬೈಜಾಲ್**
**ಪ್ರಧಾನ ವ್ಯವಸ್ಥಾಪಕ – ಪ್ರಭಾರ**

**ಅನುಬಂಧ**

**ನಮೂನೆ**

ಒಂದು ಕ್ಯಾಲೆಂಡರ್ ವರ್ಷದಲ್ಲಿ 100,000 ಅಮೇರಿಕಾ ಡಾಲರ್‌ಗಳಿಗೆ ಮೀರಿದ ಮೊಬಲಗಿಗೆ ಸಂಬಂಧಿಸಿದಂತೆ ಅಂತರ ರಾಷ್ಟ್ರೀಯ ಡೆಬಿಟ್ ಕಾರ್ಡ್‌ಗಳ ಫೊರೆಕ್ಸ್ ಬಳಕೆಯ ವಿವರಗಳನ್ನು ಸೂಚಿಸುವ ವಿವರಣಾ ಪಟ್ಟಿ – ಡಿಸೆಂಬರ್ 31, ----------- ರಂದು ಇದ್ದಂತೆ

ಬ್ಯಾಂಕಿನ ಹೆಸರು

| **ಖಾತೆದಾರನ ಹೆಸರು** | **ಹಣ (ಮೊಬಲಗು) (ಅಮೇರಿಕಾ ಡಾಲರ್‌ಗಳಲ್ಲಿ)** | | ಷರಾ |
|---|---|---|---|
| | ನಗದಾಗಿ ತೆಗೆದದ್ದು | ವ್ಯಾಪಾರಿ ಸಂಸ್ಥೆಗಳಲ್ಲಿ ಬಳಸಿದ್ದು | |

ಸಹಿ:

ಹೆಸರು ಮತ್ತು ಹುದ್ದೆ:

ದಿನಾಂಕ:

ಮೊಹರು: